# KARNATAKA STATE BAR COUNCIL

(Statutory Body Constituted under the Advocate Act, 1961)

ಮಿಟ್ಟಲಕೋಡ ಎಸ್. ಎಸ್
ಅಧ್ಯಕ್ಷರು

MITTALAKOD S. S
CHAIRMAN

KSBC/642/2025

19/4/2025

ಗೆ,

ಅಧ್ಯಕ್ಷರು / ಕಾರ್ಯದರ್ಶಿ,
ವಕೀಲರ ಸಂಘ,

ಮಾನ್ಯರೇ,

**ವಿಷಯ : ದಿನಾಂಕ 21/4/2025 - ಸೋಮವಾರದಂದು ಮೌನ ಪ್ರತಿಭಟನೆ ನಡೆಸುವ ಕುರಿತು**

------------

ಭಾರತೀಯ ವಕೀಲರ ಪರಿಷತ್ತಿನ ಸಹ ಅಧ್ಯಕ್ಷರು, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು ಹಾಗೂ ಹಿರಿಯ ವಕೀಲರಾದ ಶ್ರೀ. ಸದಾಶಿವ ರೆಡ್ಡಿಯವರ ಕಚೇರಿಯಲ್ಲಿ ದಿನಾಂಕ 16/4/2025 ರಂದು ಬೆಳಿಗ್ಗೆ 8.30 ಕ್ಕೆ ಅವರ ಮೇಲೆ ಅಪರಿಚಿತರಿಂದ ನಡೆದ ಭೀಕರ ಹಲ್ಲೆ ಮತ್ತು ದಾಳಿಯನ್ನು ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ತೀವ್ರವಾಗಿ ಖಂಡಿಸುತ್ತದೆ ಹಾಗೂ ಈ ದೌರ್ಜನ್ಯಕಾರಿ ಹಲ್ಲೆಯ ಬಗ್ಗೆ ತೀವ್ರ ಆಕ್ರೋಶ ಹಾಗೂ ವಿಷಾದವನ್ನು ವ್ಯಕ್ತಪಡಿಸುತ್ತದೆ.

ದಿನಾಂಕ 19/4/2025 ರಂದು ರಾಜ್ಯ ವಕೀಲರ ಪರಿಷತ್ತಿನಲ್ಲಿ ತುರ್ತು ಸಭೆಯನ್ನು ಕರೆದು ಈ ದುರ್ಘಟನೆಯ ಬಗ್ಗೆ ದೀರ್ಘವಾಗಿ ಚರ್ಚಿಸಲಾಗಿ, ಸರ್ವ ಸದಸ್ಯರ ಅನುಮತಿಯ ಮೇರೆಗೆ " ದಿನಾಂಕ 21/4/2025 ಸೋಮವಾರದಂದು ರಾಜ್ಯದ ಎಲ್ಲಾ ವಕೀಲರು ತಮ್ಮ ಬಲಗೈ ತೋಳಿಗೆ ಕೆಂಪು ಪಟ್ಟಿಯನ್ನು ಧರಿಸಿ, ಸಾಂಕೇತಿವಾಗಿ ಈ ಕೃತ್ಯವನ್ನು ತೀವ್ರವಾಗಿ ಖಂಡಿಸಿ ಪ್ರತಿಭಟನೆ ನಡೆಸಬೇಕೆಂದು ಹಾಗೂ ತಮ್ಮ ವಕೀಲರ ಸಂಘದಲ್ಲಿ ಸಭೆಯನ್ನು ಕರೆದು ಠರಾವನ್ನು ಹೊರಡಿಸಿ, ಸಂಬಂಧಪಟ್ಟ ಡಿ.ಸಿ/ಎ.ಸಿ/ ತಹಶೀಲ್ದರಗಳಿಗೆ ಈ ದುರ್ಘಟನೆಯ ಬಗ್ಗೆ ಮೌನ ಪ್ರತಿಭಟನಾ ಮೆರವಣಿಗೆ ಮುಖಾಂತರ ಮನವಿ ಪತ್ರವನ್ನು ಸಲ್ಲಿಸಲು ವಿನಂತಿಸಬೇಕೆಂದು " ಠರಾವನ್ನು ಹೊರಡಿಸಲಾಗಿದೆ.

ಆದ್ದರಿಂದ ಎಲ್ಲಾ ವಕೀಲರ ಸಂಘಗಳು ಹಾಗೂ ರಾಜ್ಯದ ಎಲ್ಲಾ ವಕೀಲರು ಮೇಲೆ ತಿಳಿಸಿದ ಠರಾವಿನ ಅನ್ವಯ **ತಮ್ಮ ಬಲಗೈ ತೋಳಿಗೆ ಕೆಂಪು ಪಟ್ಟಿಯನ್ನು ಧರಿಸಿ, ಸಾಂಕೇತಿವಾಗಿ ಈ ಕೃತ್ಯವನ್ನು ತೀವ್ರವಾಗಿ ಖಂಡಿಸಿ ಪ್ರತಿಭಟನೆ ನಡೆಸಬೇಕೆಂದು ಹಾಗೂ ಸಂಬಂಧಪಟ್ಟ ಡಿ.ಸಿ/ಎ.ಸಿ/ ತಹಶೀಲ್ದರಗಳಿಗೆ ಈ ದುರ್ಘಟನೆಯ ಬಗ್ಗೆ ಮೌನ ಪ್ರತಿಭಟನಾ ಮೆರವಣಿಗೆ ಮುಖಾಂತರ ಮನವಿ ಪತ್ರವನ್ನು ಸಲ್ಲಿಸಬೇಕೆಂದು ಹಾಗೂ ಮನವಿಯ ಪ್ರತಿಯನ್ನು ರಾಜ್ಯ ವಕೀಲರ ಪರಿಷತ್ತಿಗೆ ಕಳುಹಿಸಿಕೊಡಬೇಕೆಂದು ಕೋರುತ್ತೇನೆ.**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

Mittalakod.S.S

( ಮಿಟ್ಟಲ್‌ಕೋಡ, ಎಸ್. ಎಸ್.)
ವಕೀಲರು ಮತ್ತು ಅಧ್ಯಕ್ಷರು

ವಿ. ಸೂ : ಮನವಿಯ ಪ್ರತಿ, ಪೋಟೋ ಹಾಗೂ ವಿಡಿಯೋ ರೆಕಾರ್ಡನ್ನು ರಾಜ್ಯ ವಕೀಲರ ಪರಿಷತ್ತಿನ ಇ-ಮೇಲ್ ( kar_barcouncil@yahoo.com) ಗೆ ಕಳುಹಿಸಬೇಕು.